**- -** ಅಸಲು ದಾವೆ ಸಂ**: 05/2022** ಪಿ.ಡಬ್ಲು**-2**

**ದಿ: 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ವಿ.ಎಮ್.ಎಮ್. ವಕೀಲರಿಂದ: -**

1. ವಾದಿ ಗೋಕುಲಸಾಬ ನನಗೆ ಸಂಬಂಧಿಕರಲ್ಲ. ನನ್ನ ಸ್ವಂತ ಊರು ಅರಿಷಿಣಗಿ ಆಗಿರುತ್ತದೆ. ನಿಮ್ಮ ಸ್ವಂತ ಊರು ರಾಯಚೂರು ತಾಲೂಕಿನ ಹನುಮಾಪುರ ಗ್ರಾಮ ಎಂದರೆ ಸಾಕ್ಷಿಯು ಮೊದಲು ಅಲ್ಲಿ ಇದ್ದೇವು ಈಗ ಅರಷಿಣಗಿಯಲ್ಲಿದ್ದೇವೆ ಎನ್ನುತ್ತಾರೆ. ನಿಮ್ಮ ತಂದೆ ಮತ್ತು ನಿಮ್ಮ ತಾತಾ ಹನುಮಾಪುರ

ಗ್ರಾಮದಲ್ಲಿರುತ್ತಾರೆಂದರೆ ಸರಿ. ಹನುಮಾಪುರ ಗ್ರಾಮದಲ್ಲಿ ನಿಮ್ಮ ತಾತನ ಆಸ್ತಿಗಳು ಇರುತ್ತವೆ ಎಂದರೆ ಸರಿ. ಹನುಮಾಪುರದಿಂದ ಅರಷಿಣಗಿ ಗ್ರಾಮಕ್ಕೆ ಸುಮಾರು 40 ಕಿ ಮಿ ದೂರ ಆಗುತ್ತದೆ. ಅರಿಷಿಣಗಿಯಲ್ಲಿ ನನ್ನ ಸ್ವಂತ ಮನೆ ಇರುತ್ತದೆ. ಆದರೆ ಹೊಲ ಇರುವುದಿಲ್ಲ. ನನ್ನ ಹೆಂಡತಿ ತವರು ಮನೆ ಅರಷಿಣಗಿ ಆಗಿರುತ್ತದೆ. ನನ್ನ ಹೆಂಡತಿಯ ತಂದೆ ತಾಯಿ ಗೋಕುಲಸಾಬ ಮತ್ತು ಇಮಾಂಬಿ ಆಗಿರುತ್ತಾರೆ. ನನ್ನ ಹೆಂಡತಿಯ ಹೆಸರು ದೌಲತಬಿ ಅಂತಾ ಇರುತ್ತದೆ. ನನ್ನ ಹೆಂಡತಿಗೆ 04 ಜನ ಸಹೋದರಿಯರು ಮತ್ತು 03 ಜನ ಸಹೋದರರು ಇರುತ್ತಾರೆ. ವಾದಿಯರು ನನ್ನ ಮಾವ ಮತ್ತು ಅತ್ತೆಯಾಗಿರುತ್ತಾರೆ. ನನ್ನ ಅತ್ತೆ ಇಮಾಂಬಿಯವರು ತೀರಿಕೊಂಡಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ವಿಷಯ ಬರೆದಿದ್ದಾರೆ ನನಗೆ ಗೊತ್ತಿಲ್ಲ.

2. ಈ ದಾವೆಯನ್ನು ಇಮಾಂಬಿ ಯವರು ತೀರಿಕೊಂಡ ಮೇಲೆ ಗೋಕುಲಸಾಬ ಇವರು ಜಲಾಲಸಾಬ, ಚಮದಾಸಾಬ ಮತ್ತು ಹುಚ್ಚಣ್ಣ ಇವರ ಮೇಲೆ ಮಾಡಿರುತ್ತಾರೆ. ಇವರನ್ನು ಹೊರತುಪಡಿಸಿ ಬೇರೆ ಯಾರ ಮೇಲೆ ಮಾಡಿರುವುದಿಲ್ಲ. ಹಸನಸಾಬ, ರಂಗಯ್ಯ, ಹನುಮಪ್ಪ, ಚಂದ್ರಾಮಪ್ಪ ಇವರ ಮೇಲೆ ದಾವಾ ಮಾಡಿದ್ದಾರೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹಸನಸಾಬ, ರಂಗಯ್ಯ ಇವರು ತೀರಿಕೊಂಡಿರುತ್ತಾರೆ. ಅವರು ಎಷ್ಟು ವರ್ಷಗಳಿಂದೆ ತೀರಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಹಸನಸಾಬ ಇವರಿಗೆ ಇಬ್ಬರು ಮಕ್ಕಳಿದ್ದಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಹಸನಸಾಬ ಇವರಿಗೆ 5 ಜನ ಮಕ್ಕಳಿದ್ದಾರೆ ಅವರ ಹೆಸರು, ಹುಚ್ಚಣ್ಣ, ಕಾಸಿಂಸಾಬ, ಮೋಸಿಯಾಸಾಬ, ಬಾಬುಸಾಬ ಮತ್ತು ಗೋಕುಲಸಾಬ ಎಂದರೆ ಸರಿ. ಇವರೆಲ್ಲರೂ ಅರಷಿಣಗಿ ಗ್ರಾಮದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮೃತ ರಂಗಯ್ಯನಿಗೆ ಬಾಲಮ್ಮ ಅಂತಾ ಹೆಂಡತಿ ಮತ್ತು ನಿಂಗಯ್ಯ ಎನ್ನುವ ಮಗನಿರುತ್ತಾನೆಂದರೆ ಸರಿ. ಹಸನಸಾಬ ಸುಮಾರು 20 ವರ್ಷಗಳಿಂದೆ ತೀರಿಕೊಂಡಿದ್ದಾನೆಂದರೆ ಸರಿ. ರಂಗಯ್ಯ ಸುಮಾರು 18 ವರ್ಷಗಳಿಂದೆ ತೀರಿಕೊಂಡಿರುತ್ತಾನೆಂದರೆ ಸರಿ. ಹನುಮಪ್ಪ ತಂದೆ ರಾಮಪ್ಪ ಸುಮಾರು 25 ವರ್ಷಗಳಿಂದೆ ತೀರಿಕೊಂಡಿದ್ದಾನೆಂದರೆ ಸರಿ. ಚಂದ್ರಾಮಪ್ಪ ತಂದೆ ಲಿಂಗಯ್ಯ ಇವರು ಸುಮಾರು 7 ವರ್ಷಗಳಿಂದೆ ತೀರಿಕೊಂಡಿದ್ದಾರೆಂದರೆ ಸರಿ. ಈ ಮೇಲೆ ಹೇಳಿದ ಮೃತರ ಮೇಲೆ ವಾದಿ ಈ ದಾವೆಯನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ಈ ದಾವೆಯನ್ನು ಒತ್ತುವರಿ ಮಾಡಿದ್ದಾರೆ ಎಂದು ಸಲ್ಲಿಸಿರುತ್ತಾರೆ. ಯಾರು ಯಾರು ಎಷ್ಟು ಎಷ್ಟು ಜಮೀನು ಒತ್ತುವರಿ ಮಾಡಿದ್ದಾರೆ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯು 1 ಎಕರೆ 14 ಗುಂಟೆ ಒತ್ತುವರಿ ಮಾಡಿದ್ದಾನೆ. ಮತ್ತೊಂದು 03 ಗುಂಟೆ ಊರಿನ ಕಡೆಗೆ ಒತ್ತುವರಿ ಆಗಿರುತ್ತದೆ ಇನ್ನೊಂದು ಕಡೆ 03 ಗುಂಟೆ ಒತ್ತುವರಿಯಾಗಿರುತ್ತದೆ. ಯಾವ ದಿಕ್ಕುಗಳೆಂದು ನನಗೆ ಗೊತ್ತಿಲ್ಲ. 1 ಎಕರೆ 14 ಗುಂಟೆ, ಊರಿನ ಕಡೆ ಇರುವ 03 ಗುಂಟೆ, ಇನ್ನೊಂದು 03 ಗುಂಟೆ ಜಮೀನು ಒತ್ತುವರಿ ಮಾಡಿದ ಜಮೀನುಗಳ ಚಕ್ ಬಂದಿ ನನಗೆ ಹೇಳಲು ಆಗುವುದಿಲ್ಲ. ಅವರು ಒತ್ತುವರಿ ಮಾಡಿ ಎಷ್ಟು ವರ್ಷಗಳಾಗಿದೆ ಎಮದು ನನಗೆ ಗೊತ್ತಿಲ್ಲ. ವಾದಿಯರ ಹೆಸರಿನಲ್ಲಿರುವ ದಾವಾ ಆಸ್ತಿಗಳ ದಾಖಲಾತಿಯನ್ನು ನಾನು ನೋಡಿಕೊಂಡಿರುವುದಿಲ್ಲ. 1955 ರಿಂದ 1983 ರವರೆಗಿನ ದಾವಾ ಆಸ್ತಿಗಳ ಪಹಣಿಗಳಲ್ಲಿ ಏನೇನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ.

4. ಸರ್ವೆಯನ್ನು ಮಾಡಿ 01 ವರ್ಷದ ಮೇಲೆ ಆಗಿರುತ್ತದೆ. ಸರ್ವೆ ಮಾಡಿದಾಗ ವಾದಿಯರಿಗೆ ಎಷ್ಟು ಜಮೀನು ಇದೆ ಎಂದು ಸರ್ವೆ ನಲ್ಲಿ ಬರೆದಿದ್ದಾರೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ಸರ್ವೆನಲ್ಲಿ ವಾದಿಯರಿಗೆ 02 ಎಕರೆ 18 ಗುಂಟೆ ಜಮೀನು ಇರುವುದಿಲ್ಲ 36 ಗುಂಟೆ ಮಾತ್ರ ಕಬ್ಜಾದಲ್ಲಿದ್ದಾರೆ ಎಂದು ಬರೆದಿದ್ದಾರೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ನಾನು ಚೈನ ಮಾತ್ರ ಹಿಡಿದಿರುತ್ತೇನೆ ಎನ್ನುತ್ತಾರೆ. ಸರ್ವೆ ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ. 03 ಸಲ ಸರ್ವೆ ಮಾಡಿರುತ್ತಾರೆ ನಾನು ಒಂದು ಸಲ ಹೋಗಿರುತ್ತೇನೆ. ಒಂದು ಸಲ ಸರ್ವೆ ಗೆ ಹೋಗಿದ್ದ ದಿನಾಂಕ ತಿಂಗಳು ಇಸ್ವಿ ನನಗೆ ನೆನಪಿಲ್ಲ. ಸರ್ವೆ ವರದಿಯಲ್ಲಿ 01 ಎಕರೆ 14 ಗುಂಟೆ, 1 ರಿಂದ 3ನೇ ಪ್ರತಿವಾದಿಯರು ಒತ್ತುವರಿ ಮಾಡಿದ್ದ ಬಗ್ಗೆ ಬರೆದಿದ್ದಾರೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಯಾವ ಆಧಾರದ ಮೇರೆಗೆ ಒತ್ತುವರಿ ಮಾಡಿದ್ದಾರೆ ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಹೊಲದವರು ಮಾತನಾಡುತ್ತಿದ್ದರು ಅದನ್ನು ಕೇಳಿಸಿಕೊಂಡಿದ್ದೇನೆ ಎನ್ನುತ್ತಾರೆ. ಯಾರು ಒತ್ತುವರಿ ಮಾಡಿದ್ದಾರೆ ಎಂದು ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 1 ರಿಂದ 3ನೇ ಪ್ರತಿವಾದಿಯರು 01 ಎಕರೆ 14 ಗುಂಟೆ ಹೊಲ ಒತ್ತುವರಿ ಮಾಡಿರುವುದಿಲ್ಲ

ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿ ಖರೀದಿ ಮಾಡಿದಾಗಿನಿಂದ 01 ಎಕರೆ 09 ಗುಂಟೆ ಜಮೀನು ದಾಖಲಾತಿಯಲ್ಲಿ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ಅಸ್ತಿತ್ವದಲ್ಲಿ 36 ಗುಂಟೆಯಲ್ಲಿ ಮಾತ್ರ ವಾದಿ ಕಬ್ಜಾದಲ್ಲಿದ್ದಾರೆಂದರೆ ಸರಿಯಲ್ಲ. 1982 ರ ನಂತರ ದಾಖಲಾತಿಗಳಲ್ಲಿ ವಿಸ್ತೀರ್ಣವನ್ನು ತಿದ್ದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 126 ರಲ್ಲಿ 02 ಎಕರೆ 18 ಗುಂಟೆ ಜಮೀನು ಇದೆ ಎಂದರೆ ಸಾಕ್ಷಿಯು ಅವರಿಗೆ ಹೊಲ ಜಾಸ್ತಿ ಇದೆ ವಾದಿಯರಿಗೆ ಹೊಲ ಕಡಿಮೆ ಇದೆ ಎನ್ನುತ್ತಾರೆ. ಪ್ರತಿವಾದಿಯರಿಗೆ ಜಾಸ್ತಿ ಹೊಲ ಇದೆ ಮತ್ತು ವಾದಿಯರಿಗೆ ಕಡಿಮೆ ಹೊಲ ಇದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹಸನಸಾಬ ತಂದೆ ಚಾಂದಸಾಬ ಇವರ ಹೆಸರಿಗೆ 02 ಎಕರೆ 18 ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹಸನಸಾಬ ತೀರಿಕೊಂಡಿದ್ದಾರೆ ಅವರಿಗೆ 5 ಜನ ಮಕ್ಕಳಿದ್ದಾರೆ ಎಂದರೆ ಸರಿ. ಚಂದ್ರಾಮ ತಂದೆ ನಿಂಗಯ್ಯ ಇತನಿಗೆ 01 ಎಕರೆ 09 ಗುಂಟೆ ಜಮೀನು ಇದೆ ಎಂದರೆ ಸರಿ. ವಾದಿ ಗೋಕುಲಸಾಬ ಇವರಿಗೆ ಮೊದಲು 01 ಎಕರೆ 09 ಗುಂಟೆ ಜಮೀನು ಮಾತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ನಿಮಗೆ ಗೊತ್ತಿದ್ದರೂ ನೀವು ಸುಳ್ಳು ಹೇಳುತ್ತಿದ್ದೀರಿ ಎಮದರೆ ಸರಿಯಲ್ಲ.

5. ನಿಮ್ಮ ಮಾವನ ದಾವಾ ಆಸ್ತಿಗೆ ಹೊಂದಿಕೊಂಡಂತೆ ಪೂರ್ವ ದಿಕ್ಕಿಗೆ ಮನೆಗಳು ಇವೆ ಎಂದರೆ ಸಾಕ್ಷಿಯು ಹೌದು ಊರು ಹತ್ತಿಕೊಂಡಿದೆ ಎನ್ನುತ್ತಾರೆ. ಪಶ್ಚಿಮ ದಿಕ್ಕಿಗೆ ನಡುವೆ ವಾದಿ ಮತ್ತು ಪ್ರತಿವಾದಿಯ ರ ಹೊಲದ ನಡುವೆ ಉತ್ತರ ದಕ್ಷಿಣವಾಗಿ ದಾರಿ ಇದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರ ಹೊಲಗಳ ನಡುವೆ 04 ಹುಣಿಸಿ ಮರ, 01 ಬೇವಿನ ಮರ, 03 ಟಂಗಿನ ಮರಗಳು ಇವೆ ಎಂದರೆ ಸರಿ. ಈ ಮರುಗಳು ಸುಮಾರು 35 ವರ್ಷದಿಂದ ಇವೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ಹೊಲಗಳ ನಡುವೆ ಕಲ್ಲಿನ ಒಡ್ಡು ಇದೆ ಎಂದರೆ ಮೊದಲು ಇಟ್ಟಿರಲಿಲ್ಲ ಈಗ ಇಟ್ಟಿದ್ದಾರೆ ಎನ್ನುತ್ತಾರೆ. ಸುಮಾರು 2 ವರ್ಷಗಳ ಹಿಂದೆ ಕಲ್ಲಿನ ಒಡ್ಡು ಇಟ್ಟಿದ್ದಾರೆ ಎನ್ನುತ್ತಾರೆ. ಸುಮಾರು 35 ವರ್ಷಗಳಿಂದ ಅಲ್ಲಿ ಕಲ್ಲಿನ ಒಡ್ಡು ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ ಪೂರ್ವ ಪಶ್ಚಿಮವಾಗಿ ದಾರಿ ಇದೆ ಎಂದರೆ ನನಗೆ ಗೊತ್ತಿಲ್ಲ. ಉತ್ತರ ದಿಕ್ಕಿಗೆ ದಾರಿಯಾದ ನಂತರ ಅಮರಪ್ಪ ತಂದೆ ರಂಗಪ್ಪ ಸರಿಗಿನ, ಗಲಗಿನ

ಮರಿಯಪ್ಪ ಇವರ ಪ್ಲಾಟುಗಳು ಇವೆ ಎಂದರೆ ಸರಿ. ದಕ್ಷಿಣ ದಿಕ್ಕಿಗೆ ಬಾಲೇಸಾಬ ತಂದೆ ರಹೆಮಾನಸಾಬ ಇವರ ಹೊಲಗಳು ಇವೆ ಎಂದರೆ ಸರಿ. ನೀವು ಅರಷಿಣಗಿ ಗ್ರಾಮದಲ್ಲಿ ವಾಸ ಮಾಡುವುದಿಲ್ಲ ನಿಮ್ಮ ಸ್ವಂತ ಊರಿನಲ್ಲಿ ವಾಸ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ